ಒ.ಎಸ್.ನಂ.61/2018
ಪಿ.ಡಬ್ಲೂ.1

ದಿನಾಂಕಃ18.04.2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಎಮ್. ವಕೀಲರಿಂದ

ವಾದಿ ಸಂಸ್ಥೆ ಸರ್ವೆ ನಂಃ74/1 ರಲ್ಲಿ ಇದೆ. ವಾದಿ ಸಂಸ್ಥೆಗೆ ನಾನು ಸೆಕ್ರೇಟರಿ ಇರುತ್ತೇನೆ. ವಾದಿ ಸಂಸ್ಥೆ ಹಾಗೂ 7-8 ನಿವೇಶನಗಳ ಮಾಲಿಕರ ನಡುವೆ ಈ ಮೊದಲು ಆದ ದಾರಿ ಕುರಿತು ಒಪ್ಪಂದ ಪತ್ರಕ್ಕೆ ಸಾಕ್ಷಿದಾರನೆಂದು ಸಹಿ ಮಾಡಿರುತ್ತೇನೆ. ವಾದಿ ಸಂಸ್ಥೆಗೆ ನಾನು ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸರಿಯಲ್ಲ. ವಾದಿ ಸಂಸ್ಥೆಗೆ ಭೀಮಶೇನರಾವ ತಂದೆ ಜನಾರ್ಧನರಾವ ಚೌಡಾಪೂರಕರ ಅಧ್ಯಕ್ಷರಾಗಿದ್ದು, ಅದರ ಸೆಕ್ರೇಟರಿ ಅರುಣ ತಂದೆ ಶ್ರೀಧರ ಭಟ್ಟ ಇರುತ್ತಾರೆ ಎಂದರೆ ಸಾಕ್ಷಿ ಅರುಣ್ಣ ರವರು ಮೊದಲಿನ ಸೆಕ್ರೇಟರಿ ಇದ್ದು, ಸದ್ಯ ನಾನು ಇರುತ್ತೇನೆ ಎಂದು ಹೇಳುತ್ತಾರೆ. ವಾದಿ ಸಂಸ್ಥೆಗೆ ನಾನೇ ಪ್ರಸ್ತುತ ಸೆಕ್ರೇಟರಿ ಎಂದು ತೋರಿಸಲು ಕಾಗದ ಪತ್ರ ಸಲ್ಲಿಸಿದ್ದೇನೆ.

ಪ್ರತಿವಾದಿಯು ವಿಜಯಕುಮಾರ ತಂದೆ ಭಗವಾನರಾವ ಕುಲಕರ್ಣಿ ರವರ ಕಡೆಯಿಂದ ಆಸ್ತಿ ಖರೀದಿಸಿರುತ್ತಾರೆ. ಪ್ರತಿವಾದಿ ಆಸ್ತಿ ಸಂಃ74/7 ಎಂದು ಇದೆ. ನಮ್ಮ ಆಸ್ತಿ ಹಾಗೂ ಪ್ರತಿವಾದಿಯ ಆಸ್ತಿ ಬಹಳಷ್ಟು ಅಂತರದಲ್ಲಿವೆ ಎಂದರೆ ಸರಿಯಲ್ಲ. ಈಗ ನಾನು ನೋಡುತ್ತಿರುವ ಭಾವಚಿತ್ರದಲ್ಲಿ ಪ್ರತಿವಾದಿ ಮನೆ ಇದೆ. ಸದರಿ ಮನೆಯ ಹದ್ದುಬಸ್ತಿ ಕುರಿತು ಸಿಮೇಂಟ ಕಂಬಗಳನ್ನು ನೆಡಲಾಗಿದೆ ಎಂದರೆ ಸಾಕ್ಷಿ ಅತೀಕ್ರಮಿಸಿ ಹಾಕಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಭಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಪ್ರತಿವಾದಿ ಮನೆಯ ಸಾಲಿನಲ್ಲಿ ಇನ್ನೂ 7 ಮನೆಗಳಿವೆ. ಸದರಿ ಮನೆಯ ಮಾಲಿಕರ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ಮಾತ್ರ ಆಸ್ತಿ ಅತೀಕ್ರಮಿಸಿದ ಕಾರಣ ಅವಳ ಮೇಲೆ ದಾವೆ ಸಲ್ಲಿಸಲಾಗಿದೆ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿ ಆಸ್ತಿ ಸಂಃ9/110 ಹಾಗೂ ನನ್ನ ನಿವೇಶನ ಸಂಃ 9/87 ಇದ್ದು, ನಮ್ಮ ಆಸ್ತಿಯನ್ನು ಅತೀಕ್ರಮಿಸುವ ಪ್ರಶ್ನೇಯೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಮಹಾರಾಷ್ಟ್ರದ ನಿವಾಸಿ ಇದ್ದು, ಗಾಣಗಾಪೂರದಲ್ಲಿ ಮನೆ ಕಟ್ಟಿಸಿಕೊಂಡಿರುತ್ತಾಳೆ ಎಂದರೆ ಸರಿ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪೂರ